# ಹೂವ ನೋಡಹೋಗಿ...



**ಕೋಟೆಬೆಟ್ಟದಲ್ಲಿ ಹೂಗಳ ನೋಡಹೋದವರಿಗೆ ಕುರಿಂಜಿಯ ನೀಲಲೋಕ ಆವರಿಸಿಕೊಳ್ಳಲಿಲ್ಲ. ಹೂಹಬ್ಬ ಮುಗಿದ ಸಂದರ್ಭದಲ್ಲಿ ಎದುರುಗೊಂಡಿದ್ದು ಕೊಡಗಿನ ಅಕ್ಷಯಪಾತ್ರೆಯಂಥ ನಿತ್ಯಹಬ್ಬದ ನಿಸರ್ಗಸಿರಿ.**

**■ ಡಿ.ಜಿ. ಮಲ್ಲಿಕಾರ್ಜುನ**

ಕೋಟೆಬೆಟ್ಟದಲ್ಲಿ ಮತ್ತು ಮಾಂದಲ್‌ಪಟ್ಟಿಯಲ್ಲಿ ಕುರಿಂಜಿ ಹೂ ಅರಳಿರುವ ಸಂಗತಿ ಸಾಮಾಜಿಕ ಮಾಧ್ಯಮಗಳಲ್ಲಿ ತೇಲಿ ಬಂದೊಡನೆಯೇ ಪರಿಸರ ಪ್ರೇಮಿಗಳು, ಛಾಯಾಗ್ರಾಹಕರು, ಪ್ರವಾಸ ಆಸಕ್ತರು ಕೊಡಗಿನೆಡೆಗೆ ಧಾವಿಸಿದರು. ಏಳು ವರ್ಷಕ್ಕೊಮ್ಮೆ ಘಟಿಸುವ ನೈಸರ್ಗಿಕ ವಿದ್ಯಮಾನವನ್ನು ಕ್ಯಾಮೆರಾದಲ್ಲಿ ದಾಖಲಿಸಲೆಂದು ನಾವೂ ಕೋಟೆಬೆಟ್ಟದೆಡೆಗೆ ಆಕರ್ಷಿತರಾದೆವು. ಅಲ್ಲಿಗೆ ಹೋಗಿ ಬಂದವರ ಮಾಹಿತಿ ಪಡೆದು ಕುರುಂಜಿ ಹೂವಿನ ದರ್ಶನಕ್ಕೆ ಹೋದೆವು.

ನಾವು ಹೋಗುವಷ್ಟರಲ್ಲಾಗಲೇ ತಜ್ಞರ ತಂಡ ಅಲ್ಲಿಗೆ ಭೇಟಿ ನೀಡಿ, ಅಲ್ಲಿ ಅರಳಿರುವುದು ಏಳು ವರ್ಷಗಳಿಗೊಮ್ಮೆ ಅರಳುವ 'ಸ್ಟ್ರೋಬಿಲಾಂಥಿಸ್ ಸೆಸ್ಸಿಲಿಸ್' (Strobilanthes Sessilis) ಪ್ರಭೇದ ಎಂದು ಸಾರಿದ್ದರು.

ಕೇರಳದ ಮುನ್ನಾರ್ ಬೆಟ್ಟಗಳಲ್ಲಿ ಹನ್ನೆರಡು ವರ್ಷಕ್ಕೊಮ್ಮೆ ನೀಲ ಕುರಿಂಜಿ ಹೂ ಅರಳುತ್ತದೆ. ಆ ಪುಷ್ಪಲೋಕದ ವಿಸ್ಮಯದ ಅನಾವರಣಕ್ಕೆ ಸಾಕಷ್ಟು ಮೊದಲೇ, ಅಲ್ಲಿನ ಅರಣ್ಯ ಇಲಾಖೆ ಮತ್ತು ಪ್ರವಾಸೋದ್ಯಮ ಇಲಾಖೆಗಳು ಜಂಟಿಯಾಗಿ ಪ್ರಚಾರ ಕಾರ್ಯ ಕೈಗೊಳ್ಳುತ್ತವೆ. ಅಷ್ಟೇ ಅಲ್ಲ, ಹೂಕೊಳ್ಳಕ್ಕೆ ಹೋಗುವ ರಸ್ತೆಗಳ ರಿಪೇರಿ ಮಾಡಿ, ಅತಿಥಿಗೃಹಗಳಿಗೆ ಸುಣ್ಣಬಣ್ಣ ಹೊಡೆದು, ಫಲಕ ನಿಲ್ಲಿಸಿ ಸ್ವಾಗತದ ಸಿದ್ಧತೆ ಮಾಡುತ್ತಾರೆ. ಇದಾವುದೂ ಕೊಡಗಿನ ಕುರಿಂಜಿ ಹಬ್ಬದಲ್ಲಿ ಕಾಣಿಸಲಿಲ್ಲ.

ನಾವು ಕೋಟೆಬೆಟ್ಟಕ್ಕೆ ಹೋಗುವ ಮುನ್ನ, ನಮ್ಮ ಕಾರನ್ನು ಬೆಟ್ಟದ ಬುಡದಲ್ಲಿನ ಮನೆಯ ಮುಂದೆ 100 ರೂಪಾಯಿ ಪಾರ್ಕಿಂಗ್ ಫೀ ತೆತ್ತು ನಿಲ್ಲಿಸಬೇಕಾಯಿತು. ಅಲ್ಲಿಂದ ಸ್ಥಳೀಯರ ಜೀಪುಗಳಲ್ಲಿ ಪ್ರತಿ ತಂಡಕ್ಕೆ ತಲಾ 800 ರೂಪಾಯಿ ತೆತ್ತು ಬೆಟ್ಟಕ್ಕೆ ಹೋಗಿ ಬರಬೇಕು.

